MYSORE LEGISLATIVE ASSEMBLY.

TWENTY-FIFTH DAY.

Wednesday, 8th April 1953.

The House met in the Assembly Hall, Old Public Offices, Bangalore, at Twelve of the Clock.

[Mr. SPEAKER (Sri H. Siddaiya, B.A., LL.B.) in the Chair]

QUESTIONS AND ANSWERS.

Hullers and Flour Mills.

Q.—547. Sri Y. M. CHANDRASEKHARIAH (Kadur).—

Will the Government be pleased to state:—

(*a*) the number of hullers and flour mills in the State;

(*b*) the number of hullers from which deposit has been received;

(*c*) the number of hullers without permits even after deposits have been received in respect of them;

(*d*) whether it has come to their notice that hardship is caused to the people by stopping permission to hullers to work;

(*e*) whether permits will be given to run the hullers?

A.—Sri H. SIDDAVEERAPPA (Minister for Home and Industries).—

(*a*) Number of hullers in the State is about 1,052. Particulars regarding the number of Flour Mills have been called for as the information is not readily available.

(*b*) 637.

(*c*) 35.

(*d*) No.

(*e*) Hullers which had licences before the imposition of the ban and which have been equipped with the prescribed improvements will be allowed to work after the 31st March 1953.

ಶ್ರೀ ವೈ. ಎಂ. ಚಂದ್ರಶೇಖರಯ್ಯ —ಸಂಸ್ಥಾನದಲ್ಲಿ 637 ಹಲ್ಲರುಗಳಿಂದ ಡಿಪಾಜಿಟ್ ಮೊಬಲಗುಗಳನ್ನು ತೆಗೆದುಕೊಳ್ಳಲಾಗಿದೆಯೆಂದು ಹೇಳಿದ್ದೀರಿ. ಈ ರೀತಿ ಡಿಪಾಜಿಟ್‌ಗಳನ್ನು ಕಟ್ಟಿಸಿಕೊಂಡು ಎಷ್ಟು ದಿವಸ ಗಳಾಗಿವೆ?

ಶ್ರೀ ಎಚ್. ಸಿದ್ದವೀರಪ್ಪ.—ನೋಟೀಸ್.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಈ ರೀತಿ ಯಾಗಿ ಡಿಪಾಜಿಟ್ ಕಟ್ಟಿಸಿಕೊಂಡು 3-4 ವರ್ಷಗಳಾದರೂ ಈವರೆಗೂ ಅವರಿಗೆ ಅನುಮತಿ ಕೊಡದಿರುವುದಕ್ಕೆ ಕಾರಣವೇನು?

ಶ್ರೀ ಎಚ್. ಸಿದ್ದವೀರಪ್ಪ.—ಇತ್ತೀಚೆಗೆ ಸರ್ಕಾರದವರು ಒಂದು ಆರ್ಡರ್ ಮಾಡಿದ್ದಾರೆ. ಆ ಆರ್ಡರ್ ಪ್ರಕಾರ 1951ನೆಯ ಇಸವಿ ಜನವರಿ ಒಂದನೆಯ ತಾರೀಖಿನೊಳಗೆ ಯಾವ ಯಾವ ಹಲ್ಲರ್‌ಗಳಿದ್ದುವೋ ಅವುಗಳಿಗೆ ಮಾತ್ರ ಲೈಸೆನ್ಸ್ ಕೊಡಬೇಕೆಂದಿದೆ. ಇದರ ಮೇಲೆ ಹೊಸದಾಗಿ ಯಾರಿಗೂ ಕೊಡುತ್ತಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಆ ಗೌರ್ನಮೆಂಟ್ ಆರ್ಡರು ಇಂಡಿಯಾ ಸರ್ಕಾರದವರು ಮಾಡಿದ ಆರ್ಡರೇ ಅಥವಾ ತಾವು ಮಾಡಿದ ಆರ್ಡರೇ?

ಶ್ರೀ ಎಚ್. ಸಿದ್ದವೀರಪ್ಪ.—ಅದು ಇಂಡಿಯಾ ಗೌರ್ನಮೆಂಟಿನದು. 19-2-1950 ರಲ್ಲಿ ಒಂದು ಆರ್ಡರ್ ಹೊರಡಿಸಿ 'ಹೊಸದಾಗಿ ಇನ್ನುಮೇಲೆ ಹಲ್ಲರುಗಳಿಗೆ ಲೈಸನ್ಸ್ ಕೊಡಬೇಡಿ, ಇದರಿಂದ ಇಳಿವರಿ ಕಡಿಮೆಯಾಗುತ್ತದೆ. ಹಾಗೂ nutrition value ಕೂಡ ಕಡಿಮೆಯಾಗುತ್ತದೆ, ಇದರಿಂದಾಗಿ ಆಹಾರ ಪರಿಸ್ಥಿತಿ ತೊಂದರೆಗೆ ಬರುತ್ತದೆ ಎಂದು ನಮ್ಮ ಸರ್ಕಾರದ ಗಮನಕ್ಕೆ ತಂದಮೇಲೆ, ಅವರ ಆರ್ಡರಿಗನುಸಾರವಾಗಿ ನಾವೂ ಒಂದು ಆರ್ಡರ್ ಮಾಡಿದ್ದೇವೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಹಿಂದೆಯಿದ್ದ ಹಲ್ಲರುಗಳಿಗೆ ಲೈಸೆನ್ಸ್ ಕೊಟ್ಟದ್ದರಿಂದ ಆಹಾರಾಂಶ ಕಡಮೆಯಾಗುವುದಿಲ್ಲವೇ? ಹೊಸದಾಗಿ ಕೊಟ್ಟರೆ ಮಾತ್ರ ಕಡಮೆಯಾಗುತ್ತದೆಂದು ಏಕೆ ಭಾವಿಸುತ್ತೀರಿ?

ಶ್ರೀ ಎಚ್. ಸಿದ್ದವೀರಪ್ಪ.—ಹಿಂದೆ ಕೊಟ್ಟದ್ದಾಯಿತು, ಇನ್ನುಮೇಲೆ ಕೊಡುವುದು ಬೇಡ ಎಂಬುದು ಅಭಿಪ್ರಾಯ. ಹಿಂದಿದ್ದ ಹಲ್ಲರ್‌ಗಳಲ್ಲಿಯೂ ಪಾಲಿಷಿಂಗ್ ಜಾಸ್ತಿಯಾಗುತ್ತದೆಂದು ಗೊತ್ತಿದ್ದರೂ, ಈಗಿನ ಪರಿಸ್ಥಿತಿಯಲ್ಲಿ ಹಿಂದಿದ್ದುವೆಲ್ಲವನ್ನೂ ಒಟ್ಟಿಗೆ ನಿಲ್ಲಿಸುವುದರಿಂದ ಅನೇಕರಿಗೆ ಬಹಳ ಕಷ್ಟವಾಗುತ್ತದೆಂದು ತಿಳಿದು ಯಾರು ಯಾರು ಜನವರಿಗೆ ಹಿಂದೆ ಇಟ್ಟುಕೊಂಡಿದ್ದರೋ ಅವರಿಗೆ ಮಾತ್ರ ಕೊಡುವುದು, ಇತರರಿಗೆ ಕೊಡಕೂಡದೆಂದು ಮಾಡಿದ್ದೇವೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಇದರಿಂದಾಗಿ ಅನೇಕ ಹಳ್ಳಿಗಳವರು 10-15 ಮೈಲಿಗಳ ದೂರ ತೊಂದರೆಪಟ್ಟುಕೊಂಡು ಹೋಗಬೇಕಾಗಿದೆಯೆಂಬುದು ತಮಗೆ ಗೊತ್ತಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಆ ರೀತಿಯಾಗಿ ಅನೇಕ ಅಹವಾಲುಗಳೂ ಅರಿಕೆಗಳೂ ಸರ್ಕಾರಕ್ಕೆ ಬಂದಿವೆ.

ಶ್ರೀ ವೈ. ಎಂ. ಚೆಂದ್ರಶೇಖರಯ್ಯ.—ದೊಡ್ಡ ಅಕ್ಕಿ ಮಿಲ್‌ಗಳವರ ಮಾತನ್ನು ಕೇಳಿಯೇನಾದರೂ ಈ ರೀತಿ ಆರ್ಡರ್ ಮಾಡಿದಿರಾ ?

ಶ್ರೀ ಎಚ್. ಸಿದ್ದವೀರಪ್ಪ.— ಇಲ್ಲ ; ಅವರ ಮಾತು ಕೇಳಿ ಮಾಡಲಿಲ್ಲ.

ಶ್ರೀ ಬಿ. ಮಾಧವಾಚಾರ್.—ಕೆಲವು ನಿಯಮಿತ inprovements ಮಾಡಬೇಕೆಂದು ಹೇಳಿದ್ದೀರಲ್ಲ, ಆ ಪ್ರಕಾರ ಯಾರಾದರೂ ಮಾಡಿದ್ದಾರೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಇದುವರೆಗೂ ಯಾರೂ ಮಾಡಿಲ್ಲ.

ಶ್ರೀ ಬಿ. ಮಾಧವಾಚಾರ್.—ಅವರುಗಳೇನಾದರೂ alternative ಸಲಹೆಗಳನ್ನೇನಾದರೂ ಮಾಡಿದ್ದಾರೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಈಗಾಗಲೇ ಒಂದು ವರ್ಷಕಾಲ ಟೈಂ ಕೊಟ್ಟಿದ್ದೇವೆ. ಆದರೂ ಅನೇಕರು ಮಾಡಿಸಿಲ್ಲ. ಈಗ ಹೊಸದಾಗಿ ಇನ್ನೂ ಕಾಲಾವಕಾಶ ಕೊಡಬೇಕೆಂದು ಕೇಳಿದಮೇಲೆ ಅವಕಾಶಕೊಟ್ಟಿದೆ.

ಶ್ರೀ ಬಿ. ಮಾಧವಾಚಾರ್...ಈಗ ಇದಕ್ಕೆ improvements ಮಾಡುವುದಕ್ಕೆ ಬೇಕಾದ ಯಂತ್ರೋಪಕರಣಗಳು ಸಿಕ್ಕವೆ ತೊಂದರೆಯಾಗಿರುವುದರಿಂದ ತಮ್ಮ ಆರ್ಡರನ್ನು ಪುನರ್ವಿಮರ್ಶೆ ಮಾಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಅನಿವಾರ್ಯವಾದ ಕಾರಣಗಳಿಂದ ಅವರು improvements ಮಾಡಿಸಿದಿದ್ದಾರೆ. ನೋಡೋಣ. I will consider it. If it is a real and genuine difficulty and if it cannot be done for reasons beyond their control then I shall have to consider.

ಶ್ರೀ ಜಿ. ದುಗ್ಗಪ್ಪ.—ತಾವು ಹೇಳಿದ ಸರ್ಕಾರಿ ಹುಕುಮ್ಮು ಸಂಸ್ಥಾನದ ಎಲ್ಲಾ ಕಡೆಯೂ ಜಾರಿಯಲ್ಲಿದೆಯೇ ಅಥವಾ ಇರ್ಲೊಂದು ಕಡೆ ಮಾತ್ರ ಜಾರಿಯಲ್ಲಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಸಂಸ್ಥಾನಾವಳಿ ಎಲ್ಲಾ ಕಡೆಯೂ ಜಾರಿಯಲ್ಲದೆ.

ಶ್ರೀ ಜಿ. ದುಗ್ಗಪ್ಪ.—ಈ ಆರ್ಡರ್ ಜಾರಿಗೆ ಬಂದ ಮೇಲೆಯೂ ಅದಕ್ಕೆ ವಿರುದ್ಧವಾಗಿ ಲೈಸೆನ್ಸ್ ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಬಂದಿಲ್ಲ.

ಶ್ರೀ ಆರ್. ಅನಂತರಾಮಚ್.—ನಾನು ನಿನ್ನೆ ಕೇಳಿದ್ದ ಒಂದು ಅಲ್ಪಕಾರಾವಧಿ ಪ್ರಶ್ನೆಯ ಸಂಬಂಧದಲ್ಲಿ, ಬೆಂಗಳೂರು ಕಾರ್ಪೊರೇಷನ್ ಪ್ರದೇಶದಲ್ಲಿ ಪ್ಲೋರ್‌ಮಿಲ್ಲುಗಳ ಜೊತೆಗೆ ಪಾಲಿಷಿಂಗ್ ಮೆಷೀನ್ ಹಾಕಿಕೊಂಡಿದ್ದವರಿಗೆ ರೈಸ್‌ಮಿಲ್ಲುಗಳಿಗಿರುವಂತೆ ಯಾವ ರೈಸೆನ್ಸನ್ನೂ ತೆಗೆದುಕೊಳ್ಳಬೇಕಾಗಿಲ್ಲವೆಂದು ಹೇಳಿದ್ದುದನ್ನು ವಿಚಾರಿಸಿ ತಿಳಿಸುತ್ತೇನೆಂದು ಹೇಳಿದ್ದಿರಿ. ಈಗ ಅದನ್ನು ವಿಚಾರಿಸಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಪಾಲಿಷಿಂಗ್ ಮೆಷೀನ್ ಇದಲು ಕಾನೂನಿನ ಪ್ರಕಾರ ಪ್ರತಿಬಂಧಕವಿದೆಯೆಂದು ಕಂಡುಬಂದಿದೆ. ಫ್ಲೋರ್ ಮಿಲ್ಲುಗಳಿಗೆ ಲೈಸೆನ್ಸ್ ಕೊಡುವವರು ಸ್ಥಳೀಯ ಸಂಸ್ಥೆಗಳವರು. ಆದ್ದರಿಂದ ಅವರು ಏನೇನು ಷರತ್ತುಗಳನ್ನು ಹಾಕಿದ್ದಾರೆಂಬುದು ಗೊತ್ತಿಲ್ಲ.

ಶ್ರೀ ಆರ್. ಅನಂತರಾಮಚ್.—ಹಿಂದೇನಾದರೂ ಈ ರೀತಿ ವಿನಾಯಿತಿ ಕೊಟ್ಟಿದ್ದರೆ, ಅದನ್ನು ವಿಚಾರಿಸಿ ತಾವೂ ಕೊಡುತ್ತೀರಾ ?

Sri H. SIDDAVEERAPPA.—I will examine it provided it does not conflict with the order already passed.

Sri M. LINGANNA.—May I know whether there is any difficulty to give further licence for hullers and for people who have deposited the amounts prior to the order ?

Sri H. SIDDAVEERAPPA.—So far as fresh hullers are concerned, I will have to write to the Government of India and see whether I can issue fresh licence. With regard to allowing old hullers to continue, that is a matter left to the discretion of the Deputy Commissioner.

Sri M. LINGANNA.—It is stated that in respect of 637 hullers, deposit has been received. May I know what action will be taken so far as the applicants are concerned ?

Sri H. SIDDAVEERAPPA.—There is a genuine demand from all parts of the State that new hullers may be licensed. The Government have not made up their mind as to what to do in the matter and I will examine it.

Sri M. LINGANNA.—What is the order of the Central Government in regard to the policy of the Government in issuing fresh licence to hullers ?

Sri H. SIDDAVEERAPPA.—The Government of India, as I have already submitted, in their letter dated 19th February 1950 have stated that no more hullers should be licensed for the reason that it is going to cause a lot of wastage and they are of the opinion that if anybody is going to have a huller, he is advised to go in for Japanese type of rice mill, that is, Sheller type and that may be examined. That is what is stated.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.— ಈಗಿರತಕ್ಕ ಹಲ್ಲರುಗಳಲ್ಲಿ ಇಳಿವರಿ ಹೆಚ್ಚು ಮಾಡುವುದಕ್ಕೆ ಏನು ಕಾರ್ಯಕ್ರಮ ಕೈಗೊಂಡಿದ್ದೀರಿ ?

ಶ್ರೀ ಎಚ್. ಸಿದ್ದವೀರಪ್ಪ.— ಏನು ಮಾಡಲಿಕ್ಕೂ ಸಾಧ್ಯವಾಗಿಲ್ಲ, ಹೊಸದಾಗಿ ಮೆಷಿನರಿಗಳನ್ನು ಹಾಕ ಬೇಕೆಂದು ಹೇಳಿದ್ದಾರೆ. ಇನ್ನೂ ಕೆಲವು ಟೆಕ್ನಿಕರ್ ವಿಷಯುಗಳಿವೆ. ಅವುಗಳನ್ನೆಲ್ಲಾ ನೋಡಿಕೊಂಡು improvements ಮಾಡಿದರೆ ಇಳಿವರಿ ಜಾಸ್ತಿ ಬರುತ್ತದೆಂದು suggestions ಕೊಟ್ಟಿದೆ; ಆದರೆ ಯಾರೂ ಇನ್ನೂ ಅದರಂತೆ ಮಾಡಿಲ್ಲ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.— ಇದನ್ನು ಸರ್ಕಾರದವರೇ demonstrate ಮಾಡಿ ಎಲ್ಲಾ ಹಲ್ಲರ್‌ಗಳನ್ನಿಟ್ಟಿರುವವರೂ ಕೂಡಲೆ ಅದರಂತೆ ಮಾಡ ಬೇಕೆಂದು ಒತ್ತಾಯ ಮಾಡುವುದು ಸರ್ಕಾರದ ಕರ್ತವ್ಯವಲ್ಲವೆ ?

Sri H. SIDDAVEERAPPA.—I am not able to follow the Hon'ble Member.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.— ಇಳಿವರಿ ಹೆಚ್ಚು ಮಾಡುವುದಕ್ಕೆ ಏನು ವಿಧಾನ ನಲಹೆ ಮಾಡಿ ದೆಯೋ ಅಂಥ ವಿಧಾನವನ್ನು ಕೂಡಲೆ ಎಲ್ಲಾ ಹಲ್ಲರ್ ಗಳವರಿಗೂ ತಿಳಿಸಿ ಅದನ್ನು ಕೈಗೊಳ್ಳಬೇಕೆಂದು ಒತ್ತಾಯ ಮಾಡುವುದು ಸರ್ಕಾರದ ಕರ್ತವ್ಯವಲ್ಲವೆ ?

Sri H. SIDDAVEERAPPA.—We have been issuing reminders to them and we have been telling them that no more time shall be given; but in spite of it, they have not done.

Sri K. PUTTASWAMY.—Can the installation of hullers be prevented by an executive order ?

Sri H. SIDDAVEERAPPA.—I will get it examined in the Law Section. I am of the opinion that what has been done is legal.

Sri K. PUTTASWAMY.—If the prescribed improvements are made, is it the opinion of the Government that the *iliwari* would be quite all right ?

Sri H. SIDDAVEERAPPA.—That is what the Government of India said in their letter after they consulted the specialists and the experts in that behalf. I think three or four items should be improved so that it may give us better *iliwari* and more rice.

Sri K. PUTTASWAMY.—Will the Government allow the installation of new hullers if they have the prescribed improvements attached to these hullers ?

Sri H. SIDDAVEERAPPA.—I will get it examined. I will take the question afresh with the Government of India and in view of the persistent demand in the State, whether it cannot be relaxed, I will get it examined.

Sri K. PUTTASWAMY.—Has it come to the notice of the Government that each family invariably uses polished rice ?

Sri H. SIDDAVEERAPPA.—I am not able to say 'Yes' or 'No'.

ಶ್ರೀ ಟಿ. ಸಿ. ಬಸಪ್ಪ.—ತಮ್ಮ ಆರ್ಡರು ಎರೆಕ್ಟ್ರಿಕ್ ಪವರಿನಿಂದ ನಡೆಯತಕ್ಕ ಹಲ್ಲರುಗಳಿಗೆ ಮಾತ್ರ ಅನ್ವಯಿಸುತ್ತದೆಯೇ ?

ಶ್ರೀ ಹೆಚ್. ಸಿದ್ದವೀರಪ್ಪ.— ಇಲ್ಲ; ಎಲ್ಲಾ ಹಲ್ಲರು ಗಳಿಗೂ ಅನ್ವಯವಾಗುತ್ತದೆ. They have not made any distinctions like that in the order.

ಶ್ರೀ ಟಿ. ಸಿ. ಬಸಪ್ಪ.— ಡೀಸೆಲ್ ಆಯಿಲ್ ಎಂಜಿನ್ ನಿಂದ ಮತ್ತು ಇತರ ವಿಧವಾದ ಮೆಷಿನರಿಗಳಿಂದ ಅನೇಕ ಹಲ್ಲರುಗಳು ನಡೆಯುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.— ಬಂದಿದೆ.

ಶ್ರೀ ಟಿ. ಸಿ. ಬಸಪ್ಪ.— ಅವು ತಮ್ಮ ಅನುಮತಿ ಯಿಲ್ಲದೆ ನಡೆಯುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.— ಅಂಥಾದ್ದು ನಮ್ಮ ಗಮನಕ್ಕೆ ಬಂದಿಲ್ಲ. ಬಂದರೆ ಕೂಡಲೆ ಕಾರ್ಯಕ್ರಮ ಕೈಗೊಳ್ಳುತ್ತೇವೆ.

ಶ್ರೀ ಎಸ್. ಗೋಪಾಲಗೌಡ.— ಒಂದು ಮಿಲ್ಲಿನಲ್ಲಿ ಹಲ್ಲರು ಮತ್ತು ಫ್ಲೋರ್‌ಮಿಲ್ ಎರಡೂ ನಡೆಯುತ್ತಿದ್ದರೆ ಫ್ಲೋರ್ ಮಿಲ್ ನಡೆಯುವುದಕ್ಕೆ ಅವಕಾಶ ಕೊಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.— ಫ್ಲೋರ್‌ಮಿಲ್ ನಡೆಸಲಿಕ್ಕೆ ಯಾವ ಪ್ರತಿಬಂಧಕವೂ ಇಲ್ಲ.

ಶ್ರೀ ಎಸ್. ಗೋಪಾಲಗೌಡ.— ಒಂದೇ ಎಂಜಿನ್ನಿನಿಂದ ಒಂದು ಫ್ಲೋರ್‌ಮಿಲ್ಲು ಮತ್ತು ಒಂದು ಹಲ್ಲರು ನಡೆಯುತ್ತಿದ್ದರೆ ?

Sri H. SIDDAVEERAPPA.—They can run only the flour mill but not the huller.

ಶ್ರೀ ಎಸ್. ಗೋಪಾಲಗೌಡ.— ಜಪಾನೀಸ್ ಹಲ್ಲರುಗಳನ್ನು ಸರ್ಕಾರದವರು ನಮ್ಮ ದೇಶಕ್ಕೆ ತರಿಸಿದ್ದಾರೆಯೆ ?

ಶ್ರೀ ಎಚ್. ಸಿದ್ದವೀರಪ್ಪ.— ನೋಟೀಸ್. You mean the Sheller type ? I want notice for that.

Mr. SPEAKER.—I think Government got some and exhibited.

Sri H. SIDDEVEERAPPA.— Thank you, Sir. It has already come and it was demonstrated at the Dasara Exhibition.

ಶ್ರೀ ಎಸ್. ಗೋಪಾಲಗೌಡ.—ಜವಾರ್ ಹಲ್ಲರು ಗಳಿಗೆ ಉತ್ತೇಜನ ಕೊಡುವ ದೃಷ್ಟಿಯಿಂದೇನಾದರೂ ಹಳೆಯ ಹಲ್ಲರುಗಳನ್ನು condemn ಮಾಡಬೇಕೆಂದು ಉದ್ದೇಶವಿದೆಯೆ ?

ಶ್ರೀ ಎಚ್. ಸಿದ್ದವೀರಪ್ಪ.—ಸರ್ಕಾರಕ್ಕೆ ಅಂಥ ಯಾವ ಉದ್ದೇಶವೂ ಇಲ್ಲ ; ಅಕ್ಕಿ ಜಾಸ್ತಿ ಬರಬೇಕು, ಇಳಿವರಿ ಕಡಮೆ ಬರಬೇಕು, ಅಷ್ಟೆ.

Acquisition of houses of the old Gangammacheri, Bangalore.

Q.—433. Sri B. T. KEMPARAJ (Bangalore South — Scheduled Castes).—

Will the Government be pleased to state :—

(*a*) when the houses of the old Gangammacheri near Town Hall in Bangalore were acquired;

(*b*) in how many stages and for what purposes ;

(*c*) how many persons that lost properties by acquisition have been given sites in exchange ;

(*d*) to how many persons sites have to be yet given ;

(*e*) whether they have thought of any scheme for housing these people ?

A.—Sri T. CHANNIAH (Minister for Public Health and Local Self-Government).—

(*a*) Between the years 1927 and 1944-45.

(*b*) Twelve.

For the construction of Town Hall and to keep the surrounding area open.

(*c*) Thirty-five.

(*d*) This can be known only when the concerned owners, whose properties were acquired, apply for sites and when all the remaining houses are acquired and taken possession of.

(*e*) Yes.

ಶ್ರೀ ಬಿ. ಟಿ. ಕೆಂಪರಾಜ್.—1927ನೆಯ ಇಸವಿಯಿಂದ 1945ರವರೆಗೆ ಆ ಕೇರಿಯಲ್ಲಿ ಎಷ್ಟು ಮನೆಗಳಿದ್ದವು ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಬಿ. ಟಿ. ಕೆಂಪರಾಜ್.— ಅವುಗಳನ್ನು ಅಕ್ವೈರ್ ಮಾಡಬೇಕಾದ ಕಾರಣವೇನಿತ್ತು ?

ಶ್ರೀ ಟಿ. ಚನ್ನಯ್ಯ.— ಕಾರಣವನ್ನು ಉತ್ತರದಲ್ಲಿ ತಿಳಿಸಿದೆ.

ಶ್ರೀ ಬಿ. ಟಿ. ಕೆಂಪರಾಜ್.— 12 ಘಟ್ಟಗಳಲ್ಲಿ ಅಕ್ವೈರ್ ಮಾಡಿದಿರಿ, ಅವರಿಗೆ ಸೈಟುಗಳನ್ನು ಕೊಡುವುದಕ್ಕೆ ಯೋಚನೆ ಮಾಡಿದ್ದೀರಾ ?

ಶ್ರೀ ಟಿ. ಚನ್ನಯ್ಯ.— ಉತ್ತರ ಕೊಟ್ಟಿದೆ. ನಂಪಿಗೆ ಕೆರೆಯ ಪಕ್ಕದಲ್ಲಿ ಗಂಗಮ್ಮಚೇರಿಯಲ್ಲಿ ಮನೆಗಳನ್ನು ಕಳೆದುಕೊಂಡವರಿಗೆ ಜಾಗ ಕೊಡಬೇಕೆಂದು ಉದ್ದೇಶಿಸಿದ್ದೇವೆ.

ಶ್ರೀ ಬಿ. ಟಿ. ಕೆಂಪರಾಜ್.— ಅಲ್ಲಿ ಮನೆಗಳನ್ನು ಕಟ್ಟಿಕೊಂಡು ಸ್ವಂತವಾಗಿ ವಾಸ ಮಾಡುತ್ತಿದ್ದಾರೆಯೆ ಅಥವಾ ಬಾಡಿಗೆಯ ಮೇಲೊ ?

ಶ್ರೀ ಟಿ. ಚನ್ನಯ್ಯ.—ಲೀಸ್ ಬೇಸಿಸ್ ಮೇಲೆ ಕೊಡಬೇಕೆಂಬ ಅಭಿಪ್ರಾಯವಿದೆ.

ಶ್ರೀ ಪಿ. ಆರ್. ರಾಮಯ್ಯ.—ಹಳೇಗಂಗಮ್ಮಚೇರಿ ಪ್ರದೇಶದಲ್ಲಿ ಎಷ್ಟು ಮನೆಗಳನ್ನು ಅಕ್ವೈರ್ ಮಾಡಬೇಕೋ ಅಷ್ಟೂ ಅಕ್ವೈರ್ ಆಗಿದೆಯೆ ?

ಶ್ರೀ ಟಿ. ಚನ್ನಯ್ಯ.— ಮಾಡಿದೆ, ಇನ್ನೂ ವಶಕ್ಕೆ ತೆಗೆದುಕೊಂಡಿಲ್ಲ.

ಶ್ರೀ ಪಿ. ಆರ್. ರಾಮಯ್ಯ.— ಎಷ್ಟು ವಶಕ್ಕೆ ಬಂದಿಲ್ಲವೆಂದು ಹೇಳುತ್ತೀರಿ ?

ಶ್ರೀ ಟಿ. ಚನ್ನಯ್ಯ.— 68.

ಶ್ರೀ ಪಿ. ಆರ್. ರಾಮಯ್ಯ.—ಈಗ ಅಲ್ಲಿ ದಕ್ಷಿಣ ಭಾಗದಲ್ಲಿರುವ ಅನೇಕರಲ್ಲಿ, ನಮಗೆ ಬೇರೆ ಕಡೆ ಜಾಗ ಬೇಕಾಗಿಲ್ಲ, ಅಲ್ಲೇ ಸೈಟುಗಳನ್ನು ಮಾಡುವ ಪಕ್ಷದಲ್ಲಿ ಇತರರಿಗೆ ಕೊಡುವ ಖರೀದಿಗೆ ನಾವು ಕೊಂಡುಕೊಳ್ಳಲು ತಯಾರಾಗಿದ್ದೇವೆ ಎಂದು ಎಷ್ಟು ಜನ ಕೇಳಿದ್ದಾರೆ ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಪಿ. ಆರ್. ರಾಮಯ್ಯ.—ಹಾಗೆ ಕೊಡುವುದರಲ್ಲಿ ಏನಾದರೂ ಅಭ್ಯಂತರವಿದೆಯೆ ?

ಶ್ರೀ ಟಿ. ಚನ್ನಯ್ಯ.—ಅಲ್ಲರುವ ಜಾಗವನ್ನೆಲ್ಲಾ ಅಕ್ವೈರ್ ಮಾಡಬೇಕೆಂಬ ಉದ್ದೇಶದಿಂದ ಮಾಡಿರುವುದು. ಆ ಸ್ಥಳದಲ್ಲಿ ಜಾಗಕೊಡಬೇಕೆಂಬ ಉದ್ದೇಶದಿಂದಲ್ಲ. ಹಿಂದು ವೇಳೆ ಸೈಟುಗಳನ್ನು ವಿಂಗಡಿಸಿ ಹರಾಜು ಮಾಡಿದರೆ ಅವರೂ ಕೊಂಡುಕೊಳ್ಳಬಹುದು.

ಶ್ರೀ ಪಿ. ಆರ್. ರಾಮಯ್ಯ.—ತಾವು ಎಷ್ಟೋ ಅಕ್ವೈರ್ ಮಾಡಿಕೊಂಡಿದ್ದೀರಿ. ಅದರಲ್ಲಿ ಉಳಿದ ಜಾಗವನ್ನು ಹರಾಜು ಮಾಡುತ್ತೇವೆಂದು ಹೇಳಿದಿರಿ. ಹಾಗೆ ಹರಾಜಿನಲ್ಲಿ ಎಷ್ಟು ಮಾರುತ್ತೀರಿ ಮತ್ತು ಎಷ್ಟು ಇಟ್ಟುಕೊಳ್ಳುತ್ತೀರಿ ?

ಶ್ರೀ ಟಿ. ಚನ್ನಯ್ಯ.—ಈಗ ಹಳೇಗಂಗಮ್ಮಚೇರಿ ಇರತಕ್ಕ ಪ್ರದೇಶವನ್ನು ಅಕ್ವೈರ್ ಮಾಡಬೇಕೆಂದು ಸರ್ಕಾರಿ ಆಜ್ಞೆಯಾಗಿದೆ. ಇದರಲ್ಲಿ ಎರಡು ಸೈಟುಗಳನ್ನು ಬೋರ್ಡಿಂಗ್ ಹೋಮಿಗೂ ಇನ್ನೊಂದು ಕ್ಯಾಥೊಲಿಕ್ ಮಿಷನ್ ಚರ್ಚಿಗೂ, ಒಂದನ್ನು ಓರ್ಫನೆಡ್ ಕ್ರಾಸ್ ಕಟ್ಟಡಕ್ಕೂ ಬಿಟ್ಟಿದೆ. ಬಾಕಿ ನಮ್ಮಾರು ಒಂದು ಎಕರೆ ಜಮೀನನ್ನು ಸೈಟುಗಳನ್ನಾಗಿ ವಿಂಗಡಣೆ ಮಾಡಿ ಹರಾಜು ಮಾಡಬೇಕೆಂದಿದೆ.

ಶ್ರೀ ಪಿ. ಆರ್. ರಾಮಯ್ಯ.—ಈಗ ಅಕ್ವೈರ್ ಮಾಡಿಕೊಂಡಿರುವ ಮನೆಗಳವರಿಗೆ ಹಣವನ್ನು ಪಾವತಿ ಮಾಡಿದ್ದೀರಾ ?

ಶ್ರೀ ಟಿ. ಚನ್ನಯ್ಯ.—ನೋಟೀಸ್.